# ಪ್ರಹಸನ ಪ್ರಸಂಗ

ಇಂದಿನ ಗ್ರಾಹಕ ಯುಗದಲ್ಲಿ ವ್ಯಕ್ತಿಗಳಿಗಿಂತ ವಸ್ತುಗಳಿಗೇ ಪ್ರಾಧಾನ್ಯ. ವಸ್ತುವಿನ ಮೇಲ್ವಿಚಾರಣೆಯಲ್ಲಿ ವ್ಯಕ್ತಿಯು ತನ್ನ ಹಿತವನ್ನೂ ದೇಹವನ್ನೂ ಕಡೆಗಣಿಸುತ್ತಾನೆ. ತಾನು ದಿನಾ ಸ್ನಾನ ಮಾಡದಿದ್ದರೂ ಕಾರಿಗೆ ದಿನಾ ಸ್ನಾನವಾಗಲೇಬೇಕು. ಕಾರಿಗೆ ಏನಾದರೂ ತೊಂದರೆಯಾದರೆ ಕೂಡಲೇ ರಿಪೇರಿ ಮಾಡಿಸುತ್ತಾನೆ. ಆದರೆ ತನಗೆ ಖಾಯಿಲೆಯಾದರೆ ಕಡೆಗಣಿಸುತ್ತಾನೆ.

ಒಬ್ಬನು ಒಂದು ಅತ್ಯಾಧುನಿಕವಾದ ಹೊಸ ಕಾರನ್ನು ಕೊಂಡುಕೊಂಡನು. ಕಾರಿನೊಳಗೆ ಕುಳಿತುಕೊಂಡು ತನ್ನ ಸ್ನೇಹಿತನಿಗೆ ಹೆಮ್ಮೆಯಿಂದ ಅದರ ಬಗ್ಗೆ ವಿವರಿಸುತ್ತಿದ್ದನು. ಕಾರಿನ ಒಂದು ಬಾಗಿಲು ತೆರೆದಿತ್ತು. ಎಡಗೈಯಿಂದ ಅದನ್ನು ಹಿಡಿದುಕೊಂಡಿದ್ದನು. ಹಿಂದಿನಿಂದ ಒಂದು ವಾಹನ ವೇಗವಾಗಿ ಬಂದು ಕಾರಿನ ಬಾಗಿಲನ್ನು ಕಿತ್ತುಹಾಕಿ ಮುಂದೆ ಸಾಗಿತು. ಬಾಗಿಲು ಸ್ವಲ್ಪ ದೂರ ಹೋಗಿ ಬಿತ್ತು.

ಕಾರಿನ ಮಾಲೀಕನು ತಕ್ಷಣವೇ ಪೊಲೀಸರಿಗೆ ಫೋನ್ ಮಾಡಿದನು. ಕೂಡಲೆ ಪೊಲೀಸರು ಬಂದರು ತಾನು ಹೊಸದಾಗಿ ಕೊಂಡ ಕಾರಿಗೆ ಆದ ದುರವಸ್ಥೆಯನ್ನು ತುಂಬ ದುಃಖದಿಂದ ಪೊಲೀಸರಿಗೆ ವಿವರಿಸಿದನು.

**ಪೊಲೀಸ್ :** ನೀವೆಂಥ ಜನ! ಕಾರಿನ ಬಾಗಿಲು ಹೋಗಲಿ, ನಿಮ್ಮ ಎಡಗೈಯೇ ಕತ್ತರಿಸಿ ಹೋಗಿದೆಯಲ್ರೀ!

**ಮಾಲಿಕ :** ಅಯ್ಯೊ, ಹೌದಾ! ಹಾಗಾದರೆ ಆ ಕೈಯಲ್ಲಿದ್ದ ಚಿನ್ನದ ವಾಚೂ ಹೋಯಿತಲ್ಲಪ್ಪ!

* * * *

ನಮ್ಮ ಜೀವನದಲ್ಲಿ ಎಷ್ಟೋ ತೊಂದರೆ ತಾಪತ್ರಯಗಳು ಬರುತ್ತವೆ. ಅವಕ್ಕೆ ಶಾಶ್ವತ ಪರಿಹಾರವನ್ನು ಹುಡುಕದೆ ಅಲ್ಲಿಂದಲ್ಲಿಗೇ ಅವನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ತಾಪತ್ರಯಗಳು ಹಾಗೇ ಉಳಿಯುತ್ತವೆ, ಇಲ್ಲವೇ ಬೇರೆ ರೂಪವನ್ನು ಪಡೆಯುತ್ತವೆ, ಅಷ್ಟೇ. ನಾವೇ ಅವುಗಳನ್ನು ಮೀರಿ ಹೋಗಬೇಕು, ಅದೇ ಪರಿಹಾರ.

ಒಬ್ಬ ಶ್ರೀಮಂತನಿದ್ದ. ಅವನ ಪಕ್ಕದಲ್ಲೇ ಬಡಗಿ ಮತ್ತು ಕಮ್ಮಾರರ ಮನೆಯಿತ್ತು. ದಿನವೆಲ್ಲ ಬಡಿಯುವ, ಕತ್ತರಿಸುವ ಶಬ್ದ. ಶ್ರೀಮಂತನಿಗೆ ತಡೆಯಲಾಗಲಿಲ್ಲ.

ಒಂದು ದಿನ ಅವರಿಬ್ಬರನ್ನೂ ಕರೆಸಿ ಎಚ್ಚರಿಕೆ ನೀಡಿದ : 'ನಾಳೆಯೇ ನೀವು ಜಾಗ ಬದಲಾಯಿಸಬೇಕು. ಈ ಶಬ್ದ ಕೇಳಿ ಕೇಳಿ ನನಗೆ ಸಾಕಾಗಿದೆ. ಬದಲಾಯಿಸದಿದ್ದರೆ ಜೋಕೆ!'

' ಆಗಲಿ' ಎಂದು ಹೇಳಿ ಇಬ್ಬರೂ ಹೊರಟುಹೋದರು. ಕೆಲವು ದಿನಗಳ ನಂತರ ಮತ್ತೆ ಅದೇ ಶಬ್ದ. ಶ್ರೀಮಂತನಿಗೆ ಕೋಪ ನೆತ್ತಿಗೇರಿತು. ಅವರನ್ನು ಮತ್ತೆ ಕರೆಸಿ ಕೋಪದಿಂದ ಗುಡುಗಿದ : 'ನೀವು ಏಕೆ ಮನೆ ಬದಲಾಯಿಸಲಿಲ್ಲ ?'

'ಬದಲಾಯಿಸಿದ್ದೇವೆ ಸ್ವಾಮಿ. ನಾನು ಅವನ ಮನೆಗೆ ಹೋದೆ, ಅವನು ನನ್ನ ಮನೆಗೆ ಬಂದ,' ಬಡಗಿ ಹೇಳಿದ.

* * * *

ಸಾಮಾನ್ಯವಾಗಿ ಹೆಚ್ಚಿನ ಜನರು ಅಮಾಯಿಕರಾಗಿರುತ್ತಾರೆ. ಅವರನ್ನು ನಂಬಿಸುವುದು ಸುಲಭ. ಕೆಲವು ವ್ಯಕ್ತಿಗಳು ಮತ್ತು ಸಂಸ್ಥೆಗಳು ಧರ್ಮದ ಹೆಸರಿನಲ್ಲಿ ಜನರ ಈ ಸ್ವಭಾವವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಏನೇನೋ ಮೂಢನಂಬಿಕೆಗಳಿಗೆ ಅವರನ್ನು ಬಲಿಯಾಗಿಸಿ ಹಣ ಮಾಡುತ್ತಾರೆ ಮತ್ತು ಸಾಮಾಜಿಕ ಪ್ರತಿಷ್ಠೆಯನ್ನೂ ಪಡೆಯುತ್ತಾರೆ.

ವ್ಯಕ್ತಿಯೊಬ್ಬನು ಸುಲಭವಾಗಿ ಹಣ ಸಂಪಾದನೆಯ ಉಪಾಯವನ್ನು ಕಂಡುಹಿಡಿದನು. ಅದೊಂದು ದೊಡ್ಡ ಪೆಟ್ಟಿಗೆ. ಅದರಲ್ಲಿ ಒಂದು ಕಿಂಡಿ. ಅದರ ಪಕ್ಕದಲ್ಲಿ ಬರೆದಿತ್ತು : 'ನೀವೆಷ್ಟು ಅಮಾಯಿಕರು ಎಂಬುದನ್ನು ತಿಳಿಯಬೇಕೆ? ಹಾಗಾದರೆ ಇದರಲ್ಲಿ ರೂ.೧೦೦/- ಹಾಕಿ.'

> **ನನಗೆ ಹಾಸ್ಯಪ್ರಜ್ಞೆ ಇಲ್ಲದಿದ್ದಿದ್ದರೆ ಬಹಳ ಹಿಂದೆಯೆ ನಾನು ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಿದ್ದೆ.**
>
> — ಮಹಾತ್ಮಾ ಗಾಂಧೀ

ಗಾಂಧೀ : ನಿಮಗೆ ತರಕಾರಿ ಇಷ್ಟವಿಲ್ಲವೆ?

ಲುಯಿ ಫಿಷರ್ : ಹಾಗಲ್ಲ, ಈ ತರಕಾರಿಗಳ ರುಚಿ ನನಗೆ ಹಿಡಿಸುತ್ತಿಲ್ಲ.

ಗಾಂಧೀ : ನೀವು ಅದಕ್ಕೆ ತುಂಬ ಉಪ್ಪು ಮತ್ತು ನಿಂಬೆರಸ ಸೇರಿಸಬೇಕು.

ಫಿಷರ್ : ನನ್ನ ರುಚಿಯನ್ನು ಕೊಲ್ಲಬೇಕೆಂಬುದು ನಿಮ್ಮ ಇಚ್ಛೆಯೆ?

ಗಾಂಧೀ : ಇಲ್ಲ ರುಚಿಯನ್ನು ಅಧಿಕಗೊಳಿಸುವುದಕ್ಕಾಗಿ.

ಫಿಷರ್ : ನೀವು ತುಂಬ ಅಹಿಂಸಾಪ್ರವೃತ್ತಿಯವರು. ರುಚಿಯನ್ನು ಕೊಲ್ಲುವುದೂ ನಿಮಗೆ ಇಷ್ಟವಿಲ್ಲ.

ಗಾಂಧೀ : ಜನರು ಅದೊಂದನ್ನೇ ಕೊಲ್ಲುವುದಾಗಿದ್ದರೆ ನಾನು ನಿಶ್ಚಿಂತೆಯಿಂದ ಇರುತ್ತಿದ್ದೆ. ❑